# ನಕ್ಷತ್ರಗಳಂತೆ ಮಿನುಗುವ ಸಮುದ್ರ!



ರಾತ್ರಿಯ ಹೊತ್ತು ಮಾಲ್ದೀವ್ಸ್ ನ ವಾಧೂ ದ್ವೀಪದ ಬೀಚಿನಲ್ಲಿ ಗಂಧರ್ವ ಲೋಕವೇ ತೆರೆದುಕೊಳ್ಳುತ್ತದೆ. ಆಕಾಶದಲ್ಲಿ ಮಿನುಗುವ ನೀಲಿ ನಕ್ಷತ್ರಗಳು ಧರೆಗಿಳಿದು ಬಂದಂತೆ ಸಮುದ್ರದಲ್ಲಿ ಮಿಣಿ ಮಿಣಿ ಮಿನುಗುತ್ತ ಅದ್ಭುತ ಚಿತ್ರಣವನ್ನೇ ಸೃಷ್ಟಿಸುತ್ತವೆ.

ತೈವಾನಿನ ಛಾಯಾಚಿತ್ರಗ್ರಾಹಕರಾದ ವಿಲ್ ಹೂ ಈ ನೈಸರ್ಗಿಕ ಚಮತ್ಕಾರವನ್ನು ಮೊದಲಿಗೆ ಚಿತ್ರಿಸಿದರು. ಮಾಲ್ಡೀವ್ಸ್‌ನ ವಾಧೂ ದ್ವೀಪದ ಬೀಚಿನಲ್ಲಿರುವ ರಾಶಿಗಟ್ಟಲೆ ಲಿಂಗುಲೋ ಡೀನಿಯಂ ಪಾಲಿಡ್ರ ಎಂಬ ಸಸ್ಯ ಪ್ರಬೇಧವೇ ಇದಕ್ಕೆ ಕಾರಣವೆಂದು ನಂಬಿದರು. ಈ ಜೈವಿಕ ಕಣಗಳು ಒತ್ತಡ ಬಿದ್ದಾಗ ಮಿನುಗುತ್ತವೆ. ಇದರಿಂದ ಇಲ್ಲಿ ಮಿನುಗುವ ನಕ್ಷತ್ರಗಳ ಜಾಲವೇ ನಿರ್ಮಾಣವಾಗುತ್ತದೆ.

ಜೀವಶಾಸ್ತ್ರಜ್ಞ ಮಾರಿನ್ ಹೇಳುವುದೇ ಬೇರೆ. ಇದಕ್ಕೆ ಆಸ್ಟ್ರೋಕಾಡ್ ಮೃದ್ವಂಗಿಗಳೇ ಕಾರಣವೆನ್ನುತ್ತಾರೆ. ಈ ಹಿಂದೆ ವಿವರಿಸಿದ ಜೈವಿಕವಾಗಿ ಮಿನುಗುವ ಸಸ್ಯ ಪ್ಲವಕಗಳಿಗಿಂತ ಈ ಆಸ್ಟ್ರೋಕಾಡ್ಸ್‌ಗಳು ಹೆಚ್ಚು ಹೊತ್ತು ಮಿನುಗುತ್ತವೆ ಎಂದು ಮಾರಿನ್ ಹೇಳುತ್ತಾರೆ. ಸಸ್ಯ ಪ್ರಬೇಧಗಳು ಒಂದು ಕ್ಷಣಕ್ಕಿಂತ ಹೆಚ್ಚು ಹೊತ್ತು ಮಿನುಗಲಾರವು. ಆದರೆ ಆಸ್ಟ್ರೋಕಾಡ್‌ಗಳು ಒಂದು ನಿಮಿಷಕ್ಕಿಂತ ಹೆಚ್ಚು ಹೊತ್ತು ಬೆಳಕು ಸೂಸುತ್ತವೆ. ಬೀಚಿನ ಅಂಚಿನಲ್ಲಿ ಮಿನುಗುವ ಸಾವಿರಾರು ಚುಕ್ಕಿಯ ಕಣಗಳು, ಮರಣಿಸಿದ ಈ ಜೀವಿಗಳ ರಾಶಿ ರಾಶಿಯ ಫಲಶೃತಿ ಎನ್ನಬಹುದು. ಇದು ನಿಯಮಿತವಾಗಿ ಬೀಚಿನಲ್ಲಿ ನಡೆಯುತ್ತಿರುತ್ತದೆ.

ಇಂಥ ಅಚ್ಚರಿಗಳು ಮಾಲ್ದೀವ್ಸ್‌ನಲ್ಲಷ್ಟೇ ಅಲ್ಲ; ಜಮೈಕ, ಬೆಲ್ಜಿಯಂಗಳಲ್ಲೂ ಕೂಡ ಘಟಿಸುತ್ತಿದೆ. ಈ ದೇಶಗಳಿಗೆ ನೀವು ಭೇಟಿ ನೀಡಿದರೆ ತಪ್ಪದೇ ಇಲ್ಲಿಗೆ ಹೋಗಿ ಬೀಚಿನಲ್ಲಿ ಸ್ವರ್ಗಲೋಕವನ್ನು ಆನಂದಿಸಿ.

■ ಪ್ರಕಾಶ ಎಸ್.ಮನ್ನಂಗಿ



